# 2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿತ್ರದುರ್ಗ

## ಎಸ್.ಸಿ. ನಂ. 58/2025

ಪ್ರ.ವ.ಬೋ. ದಿನಾಂಕ -25-06-2026

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | - | ಮಹಾಸ್ವಾಮಿ ಟಿ. | ಫ್ರಾ.ಸಾ. | - | 03 |
| ತಂದೆಯ ಹೆಸರು | - | ತಿಪ್ಪೇಸ್ವಾಮಿ | ಚಾ.ಸಾ. | - | 07 |
| ವಯಸ್ಸು | - | 53 ವರ್ಷ | | | |
| ಉದ್ಯೋಗ | - | ಶಿಕ್ಷಕ, ಸರಕಾರಿ ಹಿ.ಫ್ರಾ.ಶಾಲೆ, ಯರದಕಟ್ಟೆ ಹಿರಿಯೂರು | | | |
| ವಾಸ ಸ್ಥಳ | - | ಹಿರಿಯೂರು | | | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**- ಮುಖ್ಯ ವಿಚಾರಣೆ - ಸರ್ಕಾರಿ ಅಭಿಯೋಜಕರಿಂದ -**

ನಾನು ಕಳೆದ 6 ವರ್ಷಗಳಿಂದ ಯರದಕಟ್ಟೆಯ ಸರಕಾರಿ ಹಿ.ಫ್ರಾ.ಶಾಲೆಯಿಂದ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಸಾಕ್ಷಿಗೆ ನೋಟೀಸನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸದರಿ ನೋಟೀಸನ್ನು 6.3.2025 ರಂದು ನೀಡಿದ್ದರು. ಮಹಜರಿಗೆ ಬರುವಂತೆ ನೋಟೀಸು ನೀಡಿದ್ದರು. ನನ್ನ ಜೊತೆಗೆ ಚಾಸಾ:6 ಬಂದಿದ್ದರು. ನಮಗೆ ನೋಟೀಸು ಕೊಟ್ಟ ನಂತರ ಸದರಿ ವಿಷಯವನ್ನು ಬಿಇಓ ಅವರಿಗೆ ತಿಳಿಸಿದ್ದು, ಅವರು ಮಹಜರಿಗೆ ಹೋಗುವಂತೆ ನಮಗೆ ಹೇಳಿರುತ್ತಾರೆ. ನಂತರ ನಾವು ಪೋಲಿಸ್ ಠಾಣೆಗೆ ಹೋಗಿದ್ದು, ಅಲ್ಲಿ ರಘು @ ಕುಳ್ಳ ಆರೋಪಿಯನ್ನು ತೋರಿಸಿರುತ್ತಾರೆ. ಅಲ್ಲಿ ಕಳ್ಳತನ ಆಗಿದ್ದು, ಅಲ್ಲಿಗೆ ಕರೆದುಕೊಂಡು ಹೋಗುತ್ತೇವೆ ಎಂದು ಪೋಲಿಸರು ತಿಳಿಸಿರುತ್ತಾರೆ. ಆರೋಪಿಯನ್ನು ನೋಡಿದರೆ

ಗುರುತಿಸುತ್ತೇನೆ. ಸಾಕ್ಷಿಯು ವಿ.ಸಿ. ಮೂಲಕ ಹಾಜರುಪಡಿಸಿದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಪೋಲಿಸ್ ಜೀಪಿನಲ್ಲಿ ನಮ್ಮನ್ನು ಹೊಸದುರ್ಗದ ಭರಮಗಿರಿ ಕ್ರಾಸ್‌ಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಆರೋಪಿಯು ಚೈನನ್ನು ಒಬ್ಬ ಅಜ್ಜಿಯಿಂದ ಕಿತ್ತುಕೊಂಡು ಹೋಗಿದ್ದ ಬಗ್ಗೆ ಆರೋಪಿಯು ಹೇಳಿ ಸ್ಥಳವನ್ನು ತೋರಿಸಿದ್ದು, ಅಲ್ಲಿ ಪೋಲಿಸರು ಮಹಜರ ಮಾಡಿ, ಫೋಟೊ ತೆಗೆದಿರುತ್ತಾರೆ. ಮಹಜರನ್ನು 11.30 ರಿಂದ 12.20 ರವರೆಗೆ ಮಾಡಿರುತ್ತಾರೆ. ಸಾಕ್ಷಿಗೆ ಸದರಿ ಮಹಜರ, ನಕಾಶೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ–6, 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ–6(ಎ), 7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ಫೋಟೊಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಕ್ರಮವಾಗಿ ನಿಪಿ:8, 9 ಎಂದು ಗುರುತಿಸಲಾಯಿತು.

ನಂತರ ನಮ್ಮನ್ನು ಧರಂಪುರ ರಸ್ತೆ ಹಲಗಲದ್ದಿ ಗ್ರಾಮದ ಜಮೀನಿಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಸರ್ವೇ ನಂ. 186 ರಲ್ಲಿ ಒಬ್ಬ ದೀಪಾ ಇವರ ಕಿವಿಯೋಲೆಯನ್ನು ಕಿತ್ತುಕೊಂಡು ಹೋಗಿದ್ದ ಬಗ್ಗೆ ತಿಳಿಸಿ ಅಲ್ಲಿ ಸ್ಥಳವನ್ನು ತೋರಿಸಿದ್ದು, ಅಲ್ಲಿ ಪೋಲಿಸರು ಸ್ಥಳ ಮಹಜರ ಮಾಡಿ, ನಕಾಶೆ ತೆಗೆದು, ಫೋಟೊ ತೆಗೆದಿರುತ್ತಾರೆ. ಸದರಿ ಮಹಜರಿಗೆ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಸದರಿ ಮಹಜರ, ನಕಾಶೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ–10, 11 ಎಂದು, ಸಾಕ್ಷಿಯ ಸಹಿಯನ್ನು ನಿಪಿ–10(ಎ), 11(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ಫೋಟೊಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಕ್ರಮವಾಗಿ ನಿಪಿ:12, 13 ಎಂದು ಗುರುತಿಸಲಾಯಿತು.

ನಂತರ ಆದಿವಾಲಾದ ಆದಿವಾಲಾ ಫಾರಂ ಹತ್ತಿರ ನಮ್ಮನ್ನು ಒಂದು ತೋಟದ ಗೇಟ್ ತೆಗೆದು ಒಳಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಹುಲ್ಲಿನಲ್ಲಿ ಒಂದು ರಾಡನ್ನು ಆರೋಪಿಯು ತೋರಿಸಿದ್ದು, ಅದನ್ನು ಪೋಲಿಸರು ಮಹಜರ ಮಾಡಿ, ನಕಾಶೆ ತೆಗೆದು, ಫೋಟೊ ತೆಗೆದು, ಮಹಜರಿಗೆ ನನ್ನ ಸಹಿ ಪಡೆದಿರುತ್ತಾರೆ. ಪೋಲಿಸರು ರಾಡನ್ನು ವಶಪಡಿಸಿಕೊಂಡು ಸೀಲು ಮಾಡಿರುತ್ತಾರೆ. ಸದರಿ ರಾಡಿನಿಂದ ಆರೋಪಿಯು ಸದರಿ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯ ತಲೆಗೆ ಹೊಡೆದು ಅವಳ ಕೊರಳಲ್ಲಿದ್ದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಹೋಗಿದ್ದ ಬಗ್ಗೆ ತಿಳಿಸಿರುತ್ತಾನೆ. ಸಾಕ್ಷಿಗೆ ಸದರಿ ಮಹಜರ, ನಕಾಶೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ–14, 15 ಎಂದು, ಸಾಕ್ಷಿಯ ಸಹಿಯನ್ನು ನಿಪಿ–14(ಎ), 15(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು 2 ಫೋಟೊಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಕ್ರಮವಾಗಿ ನಿಪಿ:16, 17 ಎಂದು ಗುರುತಿಸಲಾಯಿತು. ಸದರಿ ರಾಡನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಒಂದು ರಾಡನ್ನು ತೋರಿಸಲಾಗಿ, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಎಂಓ:6 ಎಂದು ಗುರುತಿಸಲಾಯಿತು. ಸಿ.ಡಿ.ಯನ್ನು ನ್ಯಾಯಾಲಯದ ಕಂಪ್ಯೂಟರ್ ಸಿಬ್ಬಂದಿ ಮಿಥುನ್ ಅವರ ಮೂಲಕ ಪ್ಲೇ ಮಾಡಿ ಸಾಕ್ಷಿಗೆ ತೋರಿಸಲಾಗಿ, ಸಿಡಿಯ 3 ನೇ ಭಾಗದಲ್ಲಿ 1 ನಿಮಿಷ 58 ಸೆಕೆಂಡಿನ ಭಾಗದಲ್ಲಿ ಆರೋಪಿಯು ರಾಡನ್ನು ಹಾಜರುಪಡಿಸಿದ್ದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಸಿ.ಡಿ.ಯನ್ನು ನಿಪಿ:18 ಎಂದು ಗುರುತಿಸಲಾಯಿತು.

ನಮ್ಮ ಜೊತೆಗೆ ಚಾಸಾ:6 ಇದ್ದು, ಅವರೂ ಸಹ ಮಹಜರುಗಳಿಗೆ ಸಹಿ ಮಾಡಿರುತ್ತಾರೆ. ರಾಡನ್ನು ವಶಪಡಿಸಿಕೊಂಡು ಸೀಲು ಮಾಡಿ, ನಂತರ ನಮ್ಮ ಸಹಿಗಳನ್ನು ಪಡೆದಿರುತ್ತಾರೆ.

**– ಪಾಟೀ ಸವಾಲು – ಆರೋಪಿಯ ಪರವಾಗಿ ಶ್ರೀ ಎಸ್.ಎ.ಆರ್. ವಕೀಲರಿಂದ –**

ನಾನು ಬಿ.ಎ. ಓದಿರುತ್ತೇನೆ. ಪೋಲಿಸರು ನಮಗೆ ಕ್ರೈ.ನಂ. 516/24 ಕ್ಕೆ ಸಂಬಂಧಿಸಿದಂತೆ ಮತ್ತು ವಿಷಯಕ್ಕೆ ಸಂಬಂಧಪಟ್ಟಂತೆ ನೋಟೀಸನ್ನು ನೀಡಿದ್ದರು. ಮತ್ತು ಇಂತಹ ವ್ಯಕ್ತಿಗಳು ಇರುತ್ತಾರೆ ಎಂದು ನೋಟೀಸಿನಲ್ಲಿ ಹೇಳಿದ್ದರು. ಚಾಸಾ:6 ದೈಹಿಕ ಶಿಕ್ಷಣ ಶಿಕ್ಷಕರಾಗಿದ್ದು, ನನ್ನ ಸ್ನೇಹಿತರು ಎಂದರೆ ಸರಿ. ನಮ್ಮ ಕಚೇರಿ ಸಮಯ 9.50 ರಿಂದ 4.00 ಗಂಟೆಯವರೆಗೆ ಇರುತ್ತದೆ. ಪೋಲಿಸ್ ಪ್ರಕರಣದಲ್ಲಿ ನಾನು ಇದೇ ಮೊದಲ ಬಾರಿಗೆ ಸಾಕ್ಷಿಯಾಗಿ ಹೋಗಿರುತ್ತೇನೆ. ನಮ್ಮ ಕರ್ತವ್ಯದ ಸಮಯದಲ್ಲಿ ಪೋಲಿಸರು ನೋಟೀಸು ಕೊಟ್ಟಾಗ ನಮ್ಮ ಮೇಲಾಧಿಕಾರಿಗಳಿಗೆ ನಾವು ಲಿಖಿತವಾಗಿ ಅರ್ಜಿ ಕೊಡಬೇಕು ಎಂದರೆ ಸರಿ. ಬಿ.ಇ.ಓ. ರವರು ಲಿಖಿತವಾಗಿ ನಮಗೆ ಅನುಮತಿಯನ್ನು ನೀಡಿಲ್ಲ, ಆದರೆ ಮೌಖಿಕವಾಗಿ ತಿಳಿಸಿರುತ್ತಾರೆ. ಪೋಲಿಸರು ನಮ್ಮನ್ನು ಕರೆದಾಗ ನಾನು ಶಾಲೆಯಲ್ಲಿ ಇದ್ದೆ. ಆ ದಿನ ನಾವು ಪೋಲಿಸ್ ಠಾಣೆಗೆ ಹೋದೆವು ಎಂದರೆ ಸರಿ. ಪೋಲಿಸ್ ಠಾಣೆಯಲ್ಲಿ ಈ ಆರೋಪಿಯ ಜೊತೆಗೆ ಬೇರೆ ಆರೋಪಿಗಳು ಠಾಣೆಯಲ್ಲಿ ಕುಳಿತಿದ್ದರು ಎಂದರೆ ಸರಿಯಲ್ಲ. ಆರೋಪಿ ಒಬ್ಬನೇ ಇದ್ದ ಎಂದು ಸಾಕ್ಷಿ ಹೇಳುತ್ತಾರೆ. ಠಾಣೆಯಲ್ಲಿ ಆರೋಪಿಗೆ ಕೈ ಕೋಳ ಹಾಕಿದ್ದರು ಎಂದರೆ ಸರಿ. ಆರೋಪಿಯು ಕುಂಟಿಕೊಂಡು ನಡೆದುಕೊಂಡು ಹೋಗುತ್ತಿದ್ದ ಎಂದರೆ ಸರಿ. ಮಹಜರುಗಳನ್ನು ನಾನು ಓದಿ, ತಿಳಿದುಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ಶಾಲೆಯಿಂದ ಠಾಣೆಗೆ ಬೈಕಿನಲ್ಲಿ ಹೋಗಿರುತ್ತೇವೆ. ನಮ್ಮ ಶಾಲೆಯಿಂದ ಭರಮಗಿರಿ ಕ್ರಾಸ್ 6 ಕಿ.ಮೀ. ದೂರದಲ್ಲಿರುತ್ತದೆ. ಭರಮಗಿರಿ ಕ್ರಾಸ್ ಗೆ ಪೋಲಿಸ್ ಜೀಪಿನಲ್ಲಿ ಹೋಗಿರುತ್ತೇವೆ. ನನ್ನನ್ನು ಮತ್ತು ಚಾಸಾ:6 ರವರನ್ನು ಬಿಟ್ಟು ಚಾಲಕನನ್ನು ಸೇರಿ 4 ಜನ ಪೋಲಿಸರು ಇದ್ದರು. ಪೋಲಿಸ್ ಜೀಪ್ ನಂಬರು ನನಗೆ ಗೊತ್ತಿಲ್ಲ. ಪೋಲಿಸ್ ಠಾಣೆಯಲ್ಲಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಪೋಲಿಸ್ ಜೀಪಿನಲ್ಲಿಯೇ ಆದಿವಾಲಾ ಫಾರಂ ಮತ್ತು ಹಲಗಲದ್ದಿಗೆ ಹೋಗಿರುತ್ತೇವೆ. ಭರಮಗಿರಿ

ಕ್ರಾಸ್‌ಗೂ ಮತ್ತು ಹಲಗಲದ್ದಿಗೂ 25 ಕಿ.ಮೀ. ಅಂತರವಿದೆ. ಆಗಲೂ ನಾಲ್ಕು ಜನ ಪೋಲಿಸರು ಮತ್ತು ನಾವು ಇದ್ದೆವು. ಆರೋಪಿಯು ಕಿವಿಯೋಲೆಯನ್ನು ಕಿತ್ತುಕೊಂಡಿದ್ದ ಬಗ್ಗೆ ನನ್ನ ಸಮಕ್ಷಮ ಪೋಲಿಸರಿಗೆ ಹೇಳಿರುತ್ತಾನೆ. ಘಟ್ರೆಹಳ್ಳಿಯ ಆದಿವಾಲಾ ಫಾರಂನಲ್ಲಿ ಬೇರೆ ಬೇರೆ ತೋಟಗಳು ಇರುತ್ತವೆ ಎಂದರೆ ಸರಿ. ನಾವು ಹೋದಾಗ ತೋಟದ ಗೇಟಿಗೆ ಬೀಗ ಹಾಕಿದ್ದ ಬಗ್ಗೆ ನನಗೆ ಈಗ ನೆನಪಿಲ್ಲ. ರಾಡು ಹುಲ್ಲಿನ ಪೊದೆಯ ಮಧ್ಯದಲ್ಲಿ ಇತ್ತು. ರಾಡನ್ನು ಮೊದಲು ಪೋಲಿಸರು ತಂದು ಆರೋಪಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಿಡಿಯೋದಲ್ಲಿ ಒಬ್ಬ ಪೋಲಿಸ್ ಆರೋಪಿಯ ಪ್ಯಾಂಟನ್ನು ಹಿಡಿದಿರುವುದು ಕಾಣುತ್ತದೆ ಎಂದರೆ ಸರಿ. ಸದರಿ ವಿಡಿಯೋದಲ್ಲಿ ಆರೋಪಿ ಮತ್ತು ಇತರರು ಮಾತನಾಡುವುದು ಸ್ಪಷ್ಟವಾಗಿ ಹೇಳುವುದಿಲ್ಲ ಎಂದರೆ ಸರಿ. ವಿಡಿಯೋದಲ್ಲಿ ಮೊದಲು ನಾನು ಹೋಗುತ್ತಿದ್ದು, ನಂತರ ಆರೋಪಿ ಹೋಗುತ್ತಿದ್ದಾನೆ ಎಂದರೆ ಸಾಕ್ಷಿಯು ನಾನು ಸ್ವಲ್ಪ ದೂರ ಹೋಗಿದ್ದು, ನಂತರ ಆರೋಪಿಯು ಮುಂದೆ ಹೋಗಿರುತ್ತಾನೆ ಎಂದು ಹೇಳುತ್ತಾರೆ. ನಾನು ಯಾವುದೇ ಮಹಜರಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಸದರಿ ಮಹಜರುಗಳಿಗೆ ನಾನು ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಖಾಲಿ ಹಾಳೆಯ ಮೇಲೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ:**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)
ಓದಿ ಹೇಳಿ ಕೇಳಿ ಸರಿ ಇದೆ.

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.